ಸಂಪಂಗಿ ಹಣ ಎಗರಿಸಿಕೊಂಡು ಬಂದಿರಬೇಕು. ಆತನಿಗೆ ಇದರ ಜೊತೆ ಇನ್ನೊಬ್ಬನ ಸಹಕಾರ ಇರಬೇಕೆಂದು ಯೋಚಿಸಿದೆ. ಅದಕ್ಕೆ ಪುರಾವೆ ಆ ಲಕೋಟೆಗಳು ಮತ್ತು ಅದರಲ್ಲಿದ್ದ ಅಗೋಚರ ಅಕ್ಷರಗಳು. ಯಾರೋ ಸಂಕೇತ ನೀಡುತ್ತಿದ್ದಾರೆಂಬುದಕ್ಕೆ ಸಾಕ್ಷ್ಯ. ಖಾಲಿ ಲಕೋಟೆಯ ಅರ್ಥ ಯಾವುದೋ ನಿಗದಿತ ದಿನ, ನಿಗದಿತ ಜಾಗದಲ್ಲಿ ಭೇಟಿಯಾಗೋಣ ಎಂದಿರಲೇಬೇಕು. ಇಲ್ಲದಿದ್ರೆ ಮರುದಿನದ ಕಾಗದದಲ್ಲಿ 'ಬರಬೇಡ' ಎಂಬ ಸಂದೇಶಕ್ಕೆ ಅರ್ಥವಾದರೂ ಏನು? ಮೂರನೆಯ ಕಾಗದದಲ್ಲಿ 'ಯಾವಾಗ, ಎಲ್ಲಿ ನೀನು ಹೇಳು' ಅಂತ ಪಾದಯ್ಯ ಬರೆದಿದ್ದ. ಅಂದರೆ ಭೇಟಿಯಾಗುವ ಜಾಗವನ್ನು ಬದಲಾಯಿಸುವ ಅಗತ್ಯ ಬಂದಿದೆ ಅಂತ ಅರ್ಥವಾಯಿತು. ಪ್ರಾಯಶಃ ಪಾದಯ್ಯನ ಮೇಲೆ ಕುಟ್ಟಿಗೆ ಅನುಮಾನ ಬಂದು, ಆತನ ಹಿಂದೆ ತನ್ನ ಜನವನ್ನು ಗೂಢಚಾರಿಕೆಗೆ ಬಿಟ್ಟಿರಬೇಕು. ಅದು ಗೊತ್ತಾಗಿ ಪಾದಯ್ಯ ಆ ರೀತಿ ಕಾಗ್ದ ಬರೆದ. ನಾನು ಹೇಳಿದ್ದು ಸರಿಯಾ ಪಾದಯ್ಯ?"

ಪಾದಯ್ಯ ಗೋಣು ಆಡಿಸಿದ.

"ಆಗ ನಾನೊಂದು ಯೋಜನೆ ಹಾಕಿ, ಎರಡು ಪತ್ರಗಳನ್ನು ಬರೆದೆ, ಅಗೋಚರ ಅಕ್ಷರದಲ್ಲಿ. ಒಂದನ್ನು ಪಾದಯ್ಯನ ವಿಳಾಸಕ್ಕೆ ಕಳಿಸಿದೆ. ಇನ್ನೊಂದನ್ನು ನಾನೇ ರಾತ್ರಿ ಬಂದು, ಸಂಪಂಗಿಯ ಮನೆಯೊಳಕ್ಕೆ ಹಾಕಿ ಹೋದೆ. ಅದರಲ್ಲಿ ಈ ಸಂಜೆ ಇಲ್ಲಿಗೆ ಬರುವಂತೆ ಸೂಚಿಸಿದ್ದೆ. ಇವರಿಬ್ಬರೂ ಅದನ್ನು ನಂಬಿ ಬಂದರು. ಈಗ ನಿಮ್ಮ ಬಾಸ್ ಎಲ್ಲಿದ್ದಾನೆ ಹೇಳು, ಪಾದಯ್ಯ?"

"ಹೇಳ್ತೀನಿ. ನಾನು ಸಿಕ್ಕಿ ಬಿದ್ದ ಮೇಲೆ ಅವ್ನೂ ಯಾಕೆ ಉಳಿಯಬೇಕು? ನಾವು ಕೆಲ್ಸ ಮಾಡೋದು, ಅವ್ನು ಕಾಸು ಮಾಡೋದ್. ಅದ್ಕೇ ಈ ಬಾರಿ ಸಂಪಂಗಿಗೆ ಹೇಳಿ ಹಣದ ಚೀಲ ಎತ್ತಿಕೊಂಡು ಹೋಗೋಕೆ ಹೇಳ್ದೆ. ಆಮೇಲೆ ನಾವಿಬ್ರೂ ಹಂಚಿಕೊಳ್ಳೋಣ ಅಂತ. ಬಾಸ್ ಸುಮ್ಮನಿರೋಲ್ಲ ಅಂತ ಗೊತ್ತಿತ್ತು. ಅದ್ಕೆ ಭಾಳಾ ಜಾಗ್ರತೆ ಮಾಡ್ದೆ. ಅಗತ್ಯ ಇದ್ರೆ ಭೇಟಿಯಾಗ್ಲಿಕ್ಕೆ ಅಥವಾ ಅಪಾಯ ಬಂದ್ರೆ, ಖಾಲಿ ಲಕೋಟೆ ಕಳಿಸುದು ನಮ್ಮ ಪ್ಲಾನು. ಆವಾಗ ಸಂಪಂಗಿ ಕೊರಿಯರ್ ಮಾಡಿದ ನಾಲ್ಕು ದಿನಗಳ ನಂತ್ರ ರಾತ್ರಿ ಏಳರ ಹೊತ್ತಿಗೆ ಬಾಳುಪೇಟೆಗೆ ಬಂದು ಹೆದ್ದಾರಿಯ ಬದಿಯಲ್ಲಿರೋ ಪಾಳು ಕಟ್ಟಡವೊಂದರಲ್ಲಿ ಭೇಟಿಯಾಗಬೇಕು ಮತ್ತು ಹೆಚ್ಚು ಜಾಗರೂಕನಾಗಿರಬೇಕು ಎನ್ನುವುದು ನಮ್ಮ ಒಪ್ಪಂದ. ಮೊಬೈಲ್ ಬಳಸಿದ್ರೆ ಅಪಾಯ ಅಂತ ಈ ವ್ಯವಸ್ಥೆ. ನಾನೇ ಕುಟ್ಟಕ್ಕೆ ಹೋಗೋದರಿಂದ ಸಂಪಂಗಿಯ ಅಡಗುದಾಣ ಪತ್ತೆಯಾಬಹುದು ಅಂತ ಈ ಎಚ್ಚರಿಕೆ. ಲಕೋಟೆಲಿ ನನ್ನ ಸಂಬಂಧಿಕನ ವಿಳಾಸ ಬರೀತಿದ್ದೆ. ಕುಟ್ಟಿಯ ಜನ ಕಿರಾತಕರು. ಅವರು ಕೊರಿಯರ್ ಏಜೆನ್ಸಿಲ್ಲಿ ಬಂದು ವಿಚಾರಿಸುವ ಸಾಧ್ಯತೆಯಿದೆ ಅಂತ ಆ ವಿಳಾಸ ಬರೀತಿದ್ದೆ. ಆಮೇಲೆ ಅಲ್ಲಿಯ ಹುಡುಗನಿಗೆ ದುಡ್ಡು ಕೊಟ್ಟು ವಿಳಾಸ ಬದ್ಲಾಯಿಸ್ಲಿಕ್ಕೆ ಹೇಳಿದ್ದೆ. ಏನೋ ಮಾತಾಡ್ಲಿಕ್ಕೆ ಇತ್ತು ಅಂತ ಖಾಲಿ ಲಕೋಟೆ ಕಳ್ಸಿದ್ದೆ. ಆಗ ಗ್ಯಾಂಗಿನ ವ್ಯಕ್ತಿಯೊಬ್ಬ ನನ್ನನ್ನು ಫಾಲೋ ಮಾಡ್ತಾ ಇರೋದು ಗಮನಿಸಿದೆ. ತಕ್ಷಣ ಬರಬೇಡ ಅಂತ ಕಾಗ್ದ ಕಳಿಸಿದೆ. ಆಮೇಲೆ ಇಲ್ಲಿ ಭೇಟಿ ಬೇಡ ಅನ್ನಿಸಿ, ಬೇರೆ ಕಡೆ ಭೇಟಿಯಾಗೋಣ, ಜಾಗ ತಿಳ್ಸು ಅಂತ ಬರೆದೆ. ನನ್ನ ಹಿಂಬಾಲಿಸುವವನಿಗೆ ಚಳ್ಳೆಹಣ್ಣು ತಿನ್ನಿಸಿ, ಬರಬಹುದು ಅನ್ನೋ ಧೈರ್ಯವಿತ್ತು."

"ಅಂತಹಾ ಅರ್ಜೆಂಟು ಏನದು ಮಾತಾಡಲಿಕ್ಕೆ ಇದ್ದಿದ್ದು?" ಕರಮಚಂದ ಕೇಳ್ದ.

"ಏನಿಲ್ಲ. ಸ್ವಲ್ಪ ಹಣ ಬೇಕಿತ್ತು. ಮನೆಗೆ ಕಳಿಸಿ ಕೊಡಲು. ಅಷ್ಟೇ."

"ಸಂಪಂಗಿ ಉರುಫ್ ರಾಯರೆಡ್ಡಿ, ಹಳೆಯ ಅಪರಾಧಿ. ನಿನ್ನ ಹೆಸರು ಹೇಗೆ ತಿಳಿಯಿತು, ಗೊತ್ತೆ? ನೀನು ಬೀಗ ಮುರಿಯುವುದರಲ್ಲಿ ನಿಸ್ಸೀಮ. ನಿನ್ನ ಜಾತಕ ಎಲ್ಲಾ ಠಾಣೆಗಳಲ್ಲೂ ಇದೆ.